ಆಯುಕ್ತರ ಒಂದು ದೊಡ್ಡ ಪಟ್ಟಿ ಮತ್ತು ಅವರು ಕರ್ತವ್ಯ ನಿರ್ವಹಿಸಿದ ವರ್ಷಗಳಿದ್ದವು. ಹೀಗೆ ದೃಷ್ಟಿ ಬದಲಾದರೂ ಸಬೀನಾ ದಾವಣಿಯ ಮೇಲಿದ್ದ ಆ ಜೋಡಿ ನವಿಲುಗಳ ಬಣ್ಣ ಕಣ್ಣೊಳಗೆ ತುಂಬಿ ತುಂಬಿ ಬರುತ್ತಿತ್ತು.

'ನಿನ್ನ ಹೆಸರೇನಮ್ಮಾ?' ಅಂತ ಫೈಲಿನಲ್ಲಿ ಕಣ್ಣಿಟ್ಟೇ ಮೇಡಂ ಕೇಳಿದ್ದಕ್ಕೆ, 'ಅದರಲ್ಲಿದೆ' ಅಂತ ಫೈಲನ್ನು ತೋರಿಸಿದಳು ಸಬೀನಾ. ಮ್ಯಾಡಂಗೆ ಸಿಟ್ಟು ಏರಿತು. 'ಕೇಳಿದ್ದಕ್ಕೆ ಉತ್ತರ ಕೊಡು. ನೀನು ಹಿಂದಿಯಲ್ಲಿ ಬರೆದಿದ್ದಿ, ನನಗೆ ಹಿಂದಿ ಓದಲು ಬರೂದಿಲ್ಲ' ಅಂದರು. 'ಸಬೀನಾ ಅಂತ' ಚುಟುಕಾಗಿ ಉತ್ತರ ಬಂತು. 'ಅಡ್ಡ ಹೆಸರು ಏನು?' 'ತೆಗ್ಗಿನಮನಿ.' 'ಇದು ನಿನ್ನ ತಂದೆ ಮನೆಯ ಅಡ್ಡ ಹೆಸರೇ?' 'ಇಲ್ಲ, ನನ್ನ ಗಂಡನ ಅಡ್ಡ ಹೆಸರು ಮೇಡಂ.' 'ಎಲ್ಲಿದ್ದಾನೆ ಗಂಡ?' 'ನರಗುಂದದಲ್ಲಿ ಮೇಡಂ.' 'ಯಾಕೆ, ನಿನ್ನ ಜೊತೆ ಇಲ್ಲ?' 'ಇಲ್ಲ ಮೇಡಂ ನಾಲ್ಕು ವರ್ಷ ಆಯ್ತು ಬಿಟ್ಟು ಹೋಗಿದ್ದಾನೆ.' 'ಓಹ್! ಡಿವೋರ್ಸ್ ಆಗಿದೆ?' 'ಕಾಗದ ಪತ್ರದಲ್ಲಿ ಆಗಿಲ್ಲ, ಆದರೆ ತಲಾಖ್ ಹೇಳಿದ್ದಾನೆ ಮೇಡಂ.' 'ಮತ್ತೆ ಹೋಗಲ್ವ ನೀನು ಗಂಡನ ಕಡೆ?' 'ಇಲ್ಲ ಮೇಡಂ ಅಂವ ಬೇರೆ ಮದುವೆಯಾಗಿದ್ದಾನೆ, ಅಲ್ಲಿ ಬೇರೆ ಮಕ್ಕಳೂ ಇವೆ ಅವನಿಗೆ.' 'ಮತ್ತೂ ಅವನ ಅಡ್ಡ ಹೆಸರನ್ನು ಉಳಿಸಿಕೊಂಡಿದಿಯಲ್ಲ?' 'ಬೇಕಲ್ಲರಿ ಮತ್ತೆ, ಮಗೂಗೆ ಶಾಲೀಗ ಹಚ್ಚೊ ಮುಂದೆ?' 'ತಪ್ಪು ತಿಳೀಬೇಡ, ಯಾಕೆ ಬಿಟ್ಟೆ ಗಂಡನನ್ನು?' 'ಆ ಮನುಷ್ಯ ಸರಿ ಇದ್ದಿಲ್ಲ, ದುಡೀತಿರಲಿಲ್ಲ, ನಾನು ದುಡಿದದ್ದನ್ನೆ ಕಸಿದು ಕುಡೀತಿದ್ದ, ಹೊಡೀತಿದ್ದ ಮೇಡಂ' ಅನ್ನುತ್ತ ಎರಡೂ ಮೊಣಕೈ ಮೇಲಿನ ಬ್ಲೇಡಿನಲ್ಲಿ ಕುಯ್ದಂತಹ ಮೂರು ಹಳೆಯ ಗಾಯ ತೋರಿದಳು. ರಜಿಯಾ ಡೇಸಿ ಜೊತೆ ನಾನೂ ಮತ್ತೊಮ್ಮೆ ಪರಸ್ಪರ ದೃಷ್ಟಿ ತಪ್ಪಿಸಿದೆವು.

ರಜಿಯಾ ಇದ್ದಕ್ಕಿದ್ದಂತೆ ಘನಗಂಭೀರರಾಗಿ ಸಬೀನಾಳನ್ನು ನೋಡುತ್ತ, 'ನೀನು ಬುರ್ಖಾ ತೊಡೂದಿಲ್ಲ?' ಕೇಳಿದರು. ಸಬೀನಾ ಕೊರಳು ಕೊಂಕಿಸುತ್ತ ಅಷ್ಟೇ ನಯವಾಗಿ 'ಬುರ್ಖಾ ಮನೇಲಿ ಇದೆ ಮೇಡಂ, ಆದ್ರೆ ಸ್ವಲ್ಪ ಹರ್ದಿದೆ' ಅಂದಳು. ಅಷ್ಟರಲ್ಲೇ ಸಿದ್ದುವಿನ ಚಹದ ಟ್ರೇ, ಮಾರಿ ಬಿಸ್ಕತ್ತಿನೊಂದಿಗೆ ಬಂತು. ಯಾಕೋ ನಾವೆಲ್ಲ ಬಿಸ್ಕತ್ತು ಮುಟ್ಟದೇ ಬರೀ ಚಹ ಮಾತ್ರವೇ ಹೀರಿದೆವು. ಸಿದ್ದುಗೆ ಸನ್ನೆಯಲ್ಲೇ ಸಬೀನಾಳನ್ನು ತೋರಿದ ಮೇಡಂ, 'ಆಕೀಗೂ ಕೊಡು, ಹಾಗೇ ಕೂಡ್ರಿಸಬೇಡ' ಅಂದರು. ಚಹ ಕುಡಿಯುತ್ತಲೇ ನಾನು, 'ರಜಿಯಾ ಅವರೇ, ನೀವು ಬುರ್ಖಾ ತೊಡುತ್ತೀರ?' ಅಂತ ನಸುನಗುತ್ತಲೇ ಕೇಳಿದೆ. ಇನ್ನೂ ಗಂಭೀರರಾದ ಅವರು ಒಮ್ಮೆಲೇ 'ನಮ್ದು ವಿಷ್ಯ ಬೇರೆ, ನಾವು ಸಾಮಾಜಿಕ ಕಾರ್ಯಕರ್ತೇರು, ಅವ್ರು ತೊಡ್ಬೇಕು' ಅಂದರು. ನಾನು, 'ಹೋ ಹಾಗಿದೆಯ ನಿಯಮ?' ಅಂತ ಖಾಲಿ ಟೀ ಕಪ್ಪನ್ನು ಟ್ರೇದಲ್ಲಿಡುತ್ತ, ಸಿಸ್ಟರ್ ಡೇಸಿಯವರನ್ನು ನೋಡುತ್ತ ನಸುನಕ್ಕೆ. ಅವರು ಇದ್ದುದರಲ್ಲಿ ನೇರ ಮಾತಿನ ಗಟ್ಟಿಗಿತ್ತಿ. 'ಯಾಕ್ರೀ? ಮುಸ್ಲಿಂ ಹೆಣ್ಣುಮಕ್ಕಳು ಅಂದ್ರೆ ಎಲ್ರೂ ಒಂದೆ, ಅವರು ತೊಟ್ರೆ ನೀವೂ ತೊಡ್ಬೇಕು, ನಿಮಗೆ ನಿಯಮ ಇಲ್ಲಾಂದ್ರೆ ಅವ್ರೀಗೂ ಇಲ್ಲ' ಅಂತ ಹುಬ್ಬು ಗಂಟಿಕ್ಕೇ ಗದರಿದರು. 'ಅದು ಹಾಗಲ್ಲ, ಬುರ್ಖಾ ತೊಡದಿದ್ರೆ ನಮ್ಮಂತೆ ಮನಸ್ಸು ಸಬಲ ಇರ್ಬೇಕು, ಇಂಥವರೆಲ್ಲ ಬುರ್ಖಾ ತೊಡದಿದ್ರೆ ಹೀಗೇ ಕಷ್ಟನಷ್ಟ ಅನುಭೌಸ ಬೇಕಾಗ್ತದೆ ನೋಡಿ' ಅಂದರು ರಜಿಯಾ. ಮೇಡಂ ನಡುವೆ ಬಾಯಿ ಹಾಕಿ, 'ಅವರು ಹೇಳೋದ್ರಲ್ಲಿ ನನಗೂ ಸತ್ಯ ಇದೆ ಅನಸ್ತಿದೆ. ಒಂದು ಹೈ ಥಿಂಕಿಂಗ್ ಇರ್ಬೇಕು. ಅದು ಇಲ್ಲದಿದ್ದರೆ ಮುಖ ಮುಚ್ಚಿ ಬದುಕಬೇಕು' ಅಂದರು. 'ಅರೆ, ನನಗೆ ಈ ಚಿಂತನೆಯ ಲಾಜಿಕ್ಕೇ ಅರ್ಥವಾಗಲಿಲ್ಲ' ಸಣ್ಣಗೆ ಅನ್ನುತ್ತ ಹಣೆ ಸವರಿಕೊಳ್ಳುತ್ತ ನಾನು ಡೇಸಿ ಮುಖ ನೋಡಿದೆ. 'ಅದು ಹಾಗೇರೀ, ಸಿಂಪಲ್, ತೋಳ್ಬಲ ಇದ್ದೋರು ಯುದ್ಧಕ್ಕೆ ಬನ್ನಿ, ಇಲ್ಲದಿದ್ದೋರು ತೆಪ್ಪಗಿದ್ದು ಸೆರೆಯಾಳಾಗಿ' ಡೇಸಿ ದೊಡ್ಡ ಜೋಕು ಹೇಳಿದವರಂತೆ ತಾವೇ ನಕ್ಕರು. 'ಆದರೂ ಇಂಥವರನ್ನೂ ಅವರ ಕತ್ತಲಿಂದ ಹೊರತಂದು ಸಬಲಗೊಳಿಸುವತ್ತ ನಿಮ್ಮ ಎನ್‌ಜಿಓ ದಿಂದ ಏನಾದರೂ ಕಾರ್ಯಕ್ರಮ ಮಾಡಬಹುದು ನೀವು' ನಾನಿದನ್ನು ಹೇಳಿ ಮುಗಿಸುವುದರೊಳಗೆ